**2ನೇ ಅಪರ ಸಿ.ಜೆ. ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮದ್ದೂರು**

**ಅಸಲು ದಾವೆ ಸಂಖ್ಯೆ. 211/2012**

**PW-2-ಎ ಎಂ ಪ್ರಕಾಶ್**

**ದಿಃ30.01.2021 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 7 ನೇ ಪ್ರತಿವಾದಿ ಪರ ಶ್ರೀ ಹೆಚ್ ವಿ ಬಿ ವಕೀಲರವರಿಂದಃ-**

1. ದಾವಾಸ್ವತ್ತಿನ ಪೂರ್ವಕ್ಕೆ ಮತ್ತು ಉತ್ತರಕ್ಕೆ ನನ್ನ ಜಮೀನು ಇಲ್ಲ ಅಂದರೆ ಸರಿಯಲ್ಲ. ನನ್ನ ಜಮೀನಿನ ಆರ್ ಟಿ ಸಿ ನನ್ನ ಹೆಸರಿನಲ್ಲಿ ಬರುತ್ತಿಲ್ಲ. ಈಗ 10-12 ವರ್ಷಗಳಿಂದ ಆರ್ ಟಿ ಸಿ ನನ್ನ ಹೆಸರಿನಲ್ಲಿ ಬರುತ್ತಿಲ್ಲ. ನನ್ನ ಜಮೀನಿನ ಆರ್ ಟಿ ಸಿ ಕೆ ಐ ಡಿ ಬಿ ಹೆಸರಿನಲ್ಲಿ ಬರುತ್ತಿದೆ, ಅದು ಏಕೆ ಬರುತ್ತಿದ್ದೆ ಎಂದು ಈಗ ಹೇಳಲು ನನಗೆ ಬರುತ್ತಿಲ್ಲ. ಪಶ್ಚಿಮಕ್ಕೆ ರಾಮೇಗೌಡರ ಜಮೀನು, ದಕ್ಷಿಣಕ್ಕೆ ವಾದಿಯ ಬೇರೆ ಸರ್ವೆ ನಂಬರ್ ನಲ್ಲಿರುವ ಜಮೀನು ಬರುತ್ತಿದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ವಾದಿಯ ಜಮೀನಲ್ಲಿ 15 ತೆಂಗಿನ ಮರ, 3 ಮಾವಿನ ಮರ, 2 ಆಲದ ಮರ, 10 ಸಿಲ್ವರ್ ಮರ, 3 ತೇಗದ ಮರ, 2 ಕಾಡುಮರ 2 ಗಸಗಸೆ ಮರ ಇರುತ್ತವೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

2. ವಾದಿಯ ಜಮೀನು ಮತ್ತು ನನ್ನ ಜಮೀನು ಹಾಗೂ ಅಕ್ಕಪಕ್ಕದ ಜಮೀನು ಕೆ ಐ ಡಿ ಬಿ ಗೆ ಅಕ್ವೇರ್ ಆಗಿದೆ ಅಂದರೆ ಸರಿಯಲ್ಲ. 7 ನೇ ಪ್ರತಿವಾದಿ ದಾವಾ ಜಮೀನಲ್ಲಿ ಒತ್ತುವರಿ ಮಾಡಿದ್ದಾರೆಂದು ಹೇಳಿದ್ದೇನೆ, ಆರೀತಿ ಎಷ್ಟು ಒತ್ತುವರಿ ಮಾಡಿದ್ದಾರೆಂಬ ಪ್ರಶ್ನೆಗೆ 2 1/2 ಗುಂಟೆ ಎಂದು ಹೇಳುತ್ತಾರೆ. ಸುಮಾರು 10-12 ವರ್ಷಗಳ ಹಿಂದೆ ಆ ರೀತಿ ಒತ್ತುವರಿಯಾಗಿದೆ. ವಾದಿ ಈ ದಾವೆಯಲ್ಲಿ ಏನು ಪರಿಹಾರ ಕೇಳಿದ್ದಾರೆಂದು ನನಗೆ ಗೊತ್ತಿಲ್ಲ.

3. ಚಾಮುಂಡೇಶ್ವರಿ ಶುಗರ್ ಪ್ಯಾಕ್ಟರಿಯವರು ಅವರ ಜಾಗದಲ್ಲಿ ಒಂದು ಚಾಮುಂಡೇಶ್ವರಿ ದೇವಿಯ ದೇವಸ್ಥಾನ ಕಟ್ಟಿದ್ದಾರೆಂದರೆ ನಿಜ. ಈಗ ಒಂದು ಫೋಟೋವನ್ನು ನೋಡುತ್ತಿದ್ದೇನೆ. ಅದರಲ್ಲಿ ಕಾಣುವ ದೇವಸ್ಥಾನ ಮೇಲೆ ಹೇಳಿದ ಚಾಮುಂಡೇಶ್ವರಿ ದೇವಸ್ಥಾನವಾಗಿದೆ. ಆ ಫೋಟೋವನ್ನು ಈಗಾಗಲೇ ನಿಡಿ-1

ಎಂದು ಗುರುತಿಸಲಾಗಿದೆ. ಸದರಿ ದೇವಸ್ಥಾನದ ಮುಂಬಾಗಿಲು ಉತ್ತರ ದಿಕ್ಕಿಗಿದೆ. ಆ ದೇವಸ್ಥಾನ ಉತ್ತರ ದಿಕ್ಕಿನಲ್ಲಿ ಪೂರ್ವ ಪಶ್ಚಿಮ ವಾಗಿ ಒಂದು ರಸ್ತೆ ಹೋಗುತ್ತದೆ ಅಂದರೆ ನಿಜ. ಆ ರಸ್ತೆ ಪಶ್ಚಿಮಕ್ಕೆ ಮದ್ದೂರು ಮಳವಳ್ಳಿ ರಸ್ತೆ ಹೋಗುತ್ತದೆ.

4. ಆ ದೇವಸ್ಥಾನದ ದಕ್ಷಿಣ ದಿಕ್ಕಿಗೆ ದಾವಾ ಜಮೀನುಯಿದೆ. ನಿಡಿ-2 ಫೋಟೋದಲ್ಲಿ ಕಾಣುತ್ತಿರುವ ದೇವಸ್ಥಾನದ ಹಿಂಭಾಗದಲ್ಲಿರುವ ಸ್ವತ್ತು ಯಾವುದು ಅಂದರೆ ಸಾಕ್ಷಿ ಅದು ದಾವಾಸ್ವತ್ತು ಎಂದು ಹೇಳುತ್ತಾರೆ. ನಿಡಿ-2 ಫೋಟೋದಲ್ಲಿ ನಾನು ಮೇಲೆ ಹೇಳಿದ ಮರಗಳು ಕಾಣುತ್ತಿಲ್ಲ ಅಂದರೆ ನಿಜ. ದಾವಾಸ್ವತ್ತಿನ ಪೂರ್ವಕ್ಕೆ ನನ್ನ ಜಮೀನು ಇದೆ. ಅದು ನಿಡಿ-2 ರಲ್ಲಿ ಕಾಣುತ್ತಿದೆ. ನಿಡಿ-2 ರಲ್ಲಿ ಕಾಣುವ ಗೆಸ್ಟ್ ಹೌಸ್ ಮತ್ತು ಅಡುಗೆ ಮನೆ ಯಾರ ಜಮೀನಲ್ಲಿ ಕಟ್ಟಿದ್ದಾರೆಂದರೆ ಸಾಕ್ಷಿ ನಮ್ಮ ಸ್ವತ್ತಿನಲ್ಲಿ ಫ್ಯಾಕ್ಟರಿಯವರು ಕಟ್ಟಿದ್ದಾರೆಂದು ಹೇಳುತ್ತಾರೆ. ಸದರಿ ಗೆಸ್ಟ್ ಹೌಸ್ ಮತ್ತು ಅಡುಗೆ ಮನೆ ಕಟ್ಟಿ ಈಗ 14 ವರ್ಷವಾಗಿರಬಹುದು. ಗೆಸ್ಟ್ ಹೌಸ್ ಮತ್ತು ಅಡುಗೆ ಮನೆ ಕಟ್ಟಿದ್ದಾರೆಂದು ನಾವು ಪೊಲೀಸ್ ಕಂಪ್ಲೇಂಟ್ ಕೊಟ್ಟಿಲ್ಲ. ನನ್ನ ಜಮೀನಿನಲ್ಲಿ ಅಕ್ರಮವಾಗಿ ಗೆಸ್ಟ್ ಹೌಸ್ ಮತ್ತು ಅಡುಗೆ ಮನೆ ಕಟ್ಟಿದ್ದಾರೆಂದು ನಾನು ಸಿವಿಲ್ ಕೇಸ್ ಹಾಕಿಲ್ಲ, ಸಾಕ್ಷಿ ಈಗ ಕೇಸ್ ಹಾಕಲು ದಾಖಲೆಗಳನ್ನು ಹುಡುಕುತ್ತಿದ್ದೇನೆಂದು ಹೇಳುತ್ತಾರೆ. ನಿಡಿ-3 ರಲ್ಲಿ ಕಾಣುತ್ತಿರುವ ದೇವಸ್ಥಾನದ ಪೂರ್ವದ ದಿಕ್ಕಿನಲ್ಲಿ ಕಾಣುವ ತೆಂಗಿನ ಮರದ ಜಾಗ 7 ನೇ ಪ್ರತಿವಾದಿಗೆ ಸೇರಿದ್ದು ಅಂದರೆ ಸರಿಯಲ್ಲ. ಸಾಕ್ಷಿ ಅದು ನಮಗೆ ಸೇರಿದ್ದು ಎಂದು ಹೇಳುತ್ತಾರೆ. ಅದು ಸರ್ವೆ ನಂಃ 82/1 ಜಮೀನು. ಈ ಮೇಲೆ ಹೇಳಿದ ಜಮೀನಿನ ಆರ್ ಟಿ ಸಿ ನನ್ನ ಹೆಸರಿನಲ್ಲಿ ಬರುತ್ತಿಲ್ಲ. ನಿಡಿ-4 ರ ಫೋಟೋದಲ್ಲಿ ಕಾಣುವ ಖಾಲಿ ಜಾಗದ ಪಶ್ಚಿಮಕ್ಕೆ ಕಾಪೌಂಡ್ ಮತ್ತು ಮರಗಳು ಕಾಣುತ್ತೀವೆ ಅಂದರೆ ನಿಜ. ಆ ಕಾಪೌಂಡ್ ನಿಂದ ಪಶ್ಚಿಮಕ್ಕ ಅಣ್ಣೂರಿಗೆ ಹೋಗುವ ರಸ್ತೆಯಿದೆ ಅಂದರೆ ನಿಜ. ಆ ರಸ್ತೆ ಶುಗರ್ ಫ್ಯಾಕ್ಟರಿ ಜಾಗದಲ್ಲಿ ಮಾಡಿದ ರಸ್ತೆ ಅಂದರೆ ನಿಜ. ಆ ರಸ್ತೆಯ ಪಶ್ಚಿಮಕ್ಕೆ ಫ್ಯಾಕ್ಟರಿಗೆ ಸೇರಿದ ಜಾಗವಿದೆ ಅಂದರೆ ನಿಜ. ನಾನು ಈಗ ಓದಿ ಹೇಳುತ್ತಿರುವ ಚಕ್ಕುಬಂಧಿ ಅಂದರೆ ಪೂರ್ವಕ್ಕೆ 7 ನೇ ಪರತಿವಾದಿಯ ಫ್ಯಾಕ್ಟರಿಯ ಖಾಲಿ ಜಾಗ ಅದರ ನಂತರ ಗೆಸ್ಟ್ ಹೌಸ್ ಮತ್ತು

ಅಡುಗೆ ಮನೆ, ಪಶ್ಚಿಮಕ್ಕೆ ಕಾಪೌಂಡ್ ಮತ್ತು ಆದಾದ ನಂತರ ಅಣ್ಣೂರು ರಸ್ತೆ ಉತ್ತರಕ್ಕೆ 7 ನೇ ಪ್ರತಿವಾದಿಯ ಪ್ಯಾಕ್ಟರಿಯ ಖಾಲಿ ಜಾಗ ಮತ್ತು ಚಾಮುಂಡೇಶ್ವರಿ ದೇವಸ್ಥಾನ, ದಕ್ಷಿಣಕ್ಕೆ 7 ನೇ ಪ್ರತಿವಾದಿಯ ಪ್ಯಾಕ್ಟರಿಯ ಖಾಲಿ ಜಾಗ ಮತ್ತು ಆದಾದ ನಂತರ ಕಾಪೌಂಡ್ ಮತ್ತು ಅಣ್ಣೂರು ರಸ್ತೆ ಈ ಚಕ್ಕುಬಂಧಿ ಮಧ್ಯದಲ್ಲಿರುವ ಜಾಗವೇ ದಾವಾ ಸ್ವತ್ತು ಅಂದರೆ ಸರಿಯಲ್ಲ. ಆ ಪ್ಯಾಕ್ಟರಿ 1974-75 ರಲ್ಲಿ ಶುರುವಾಗಿದೆ ಅಂದರೆ ನಿಜ. ಸರ್ಕಾರದವರು ಕೆ ಐ ಎ ಡಿ ಬಿ ಮೂಲಕ ಆ ಜಾಗವನ್ನು ಅಕ್ವೇರ್ ಮಾಡಿ ನಂತರ ಪ್ಯಾಕ್ಟರಿ ಗೆ ಕೊಟ್ಟರು ಅಂದರೆ ಸರಿಯಲ್ಲ. ಆ ಪ್ಯಾಕ್ಟರಿಯ ಜಾಗ ಸುಮಾರು 80 ಎಕರೆ ಬರಬಹುದು ಅಂದರೆ ನಿಜ. ಪ್ಯಾಕ್ಟರಿಯವರು ಆ ಪ್ಯಾಕ್ಟರಿ ಶುರುಮಾಡುವಾಗಲೇ ತಮ್ಮ ಜಾಗಕ್ಕೆ ಸುತ್ತಲೂ ಕಾಪೌಂಡ್ ಹಾಕಿದ್ದರು ಅಂದರೆ ಸರಿಯಲ್ಲ. ವಾದಿಗೆ ದಾವಾಸ್ವತ್ತಿನ ಮೇಲೆ ಹಕ್ಕು ಮತ್ತು ಸ್ವಾಧೀನ ಇಲ್ಲ ಅಂದರೆ ಸರಿಯಲ್ಲ. ಈ ದಾವಾ ಜಮೀನಿನ ಅಕ್ಕಪಕ್ಕ ನಾವು ಯಾವುದೇ ಜಮೀನಿನ ಸ್ವಾಧೀನ ಇಲ್ಲ ಮತ್ತು ಯಾವುದೇ ಹಕ್ಕು ಇಲ್ಲ ಅಂದರೆ ಸರಿಯಲ್ಲ. ವಾದಿ ನಮ್ಮ ಸ್ನೇಹಿತರು ಅಂದರೆ ಸರಿಯಲ್ಲ. ಅವರು ನಮ್ಮ ಪಕ್ಕದ ಜಮೀನವರು. ನಾನು ಮತ್ತು ಅವರು ಸ್ನೇಹಿತರಾಗಿದ್ದರಿಂದ ಅವರ ಮಾತು ಕೇಳಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ ಒ**

(ಆದಿತ್ಯ ಆರ್ ಕಲಾಲ್)
**2ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮದ್ದೂರು.**